ಕರ್ನಾಟಕ ವಿಧಾನಸಭೆ

ಬುಧವಾರ 24ನೇ ಫೆಬ್ರುವರಿ 1993 ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಕ್ಫ್ ಅನುದಾನದಲ್ಲಿ ಹೆಚ್ಚುವರಿ ಬಗ್ಗೆ

101 (758) ಶ್ರೀ ಎ.ಎಂ. ಹಿಂಡಸಗೇರಿ (ಹುಬ್ಬಳ್ಳಿನಗರ):-

ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ. ಅರ್ಹ ವಕ್ಫ್ ಸಂಸ್ಥೆಗಳಿಗೆ ಬಿಡುಗಡೆ ಮಾಡಬೇಕಾದ ಅನುದಾನದ ಹಣವನ್ನು ರೂ. 60.00 ಲಕ್ಷದಿಂದ ರೂ. 40.00 ಲಕ್ಷಕ್ಕೆ ಕಡಿತಗೊಳಿಸಿರುವುದು ನಿಜವೆ;

ಬಿ. ಸರ್ಕಾರವು ವಕ್ಫ್ ಅನುದಾನವನ್ನು ಹೆಚ್ಚಿಸಲು ಉದ್ದೇಶಿಸಿದೆಯೆ: ಹಾಗಿದ್ದಲ್ಲಿ ಇದರ ಮೊತ್ತವೆಷ್ಟು ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು):-

ಎ. ಹೌದು. 1991-92ರಲ್ಲಿ ರೂ. 52.50 ಲಕ್ಷದಿಂದ ರೂ. 40.00 ಲಕ್ಷಕ್ಕೆ ಕಡಿತಗೊಳಿಸಲಾಗಿದೆ.

ಬಿ. ಹೌದು. ಸಾಧ್ಯವಾದಷ್ಟು.

ಶ್ರೀ ಎ.ಎಂ. ಹಿಂಡಸಗೇರಿ:- ಮಾನ್ಯ ಅಧ್ಯಕ್ಷರೆ, ವಕ್ಫ್ ಗ್ರಾಂಟ್ 50 ಲಕ್ಷ ರೂಪಾಯಿ ಇದ್ದಿದ್ದನ್ನು 40 ಲಕ್ಷ ರೂಪಾಯಿಗೆ ಇಳಿಸಿದ್ದಾರೆ. 1991 ಮತ್ತು 1992ನೇ ಸಾಲಿನಲ್ಲಿ ಕಡಿಮೆ ಮಾಡಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ವರ್ಷ ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟು ಸಾಧ್ಯವಾಗಬಹುದೆಂದು ಹೇಳಿದ್ದಾರೆ. ಕಡಿಮೆ ಏತಕ್ಕೆ ಆಯಿತು ? 12 ಲಕ್ಷ ರೂಪಾಯಿ ವಕ್ಫ್ ಸಂಸ್ಥೆಗೆ ಕಡಿಮೆ ಗ್ರಾಂಟನ್ನು ಏತಕ್ಕೆ ಕೊಟ್ಟಿದ್ದಾರೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರಿಗೆ ಕೇಳ ಬಯಸುತ್ತೇನೆ.

ಶ್ರೀ ಎಸ್.ಎಂ. ಯಾಹ್ಯ:- ಈ ವಕ್ಫ್ ಸಂಸ್ಥೆಗೆ ಬರುವಂತಹ ಹಣ 1991-92ರಲ್ಲಿಯೇ 60 ಲಕ್ಷದಿಂದ 40 ಲಕ್ಷಕ್ಕೆ ಇಳಿದಿದೆ. ಅದನ್ನು ಹೆಚ್ಚು ಮಾಡಬೇಕೆಂದು ನಾನು ಮುಖ್ಯಮಂತ್ರಿಯವರಿಗೆ ಕೇಳಿಕೊಂಡಿದ್ದೇನೆ. ಅವರಿಗೂ ಸಹ ಪತ್ರವನ್ನು ಬರೆದಿದ್ದೇನೆ. ಇದನ್ನು ಖಂಡಿತವಾಗಿಯೂ ಸರ್ಕಾರ ಹೆಚ್ಚು ಮಾಡಬೇಕೆಂದು ತೀರ್ಮಾನ ಮಾಡಿದೆ. ಎರಡನೆಯದಾಗಿ ವಕ್ಫ್‌ಗೆ ಬರುವಂತಹ ಗ್ರಾಂಟ್ಸ್ ಸರ್ಕಾರದವರು -

There is new orientation in wakf policy on utilisation of wakf funds and wakf grants. We have formulated other polices to help the economically poor people and Government has been kind enough to provide funds for

women upliftment, self-employment for women and for certain educational and other matters. So, funds have been given. Another Rs. 25 lakhs have been given for that also. We have formed the schemes for those and it will be implemented.

ಶ್ರೀ ಎ. ಎಂ. ಹಿಂಡಸಗೇರಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ವಕ್ಫ್ ವುಮನ್ ವೆಲ್‌ಫೆರ್ ಫೌಂಡೇಷನ್ ಮಾಡಲು 25 ಲಕ್ಷ ರೂಪಾಯಿಯನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದು ಬೇರೆ ಆಯಿತು, ಆದರೆ ಸತತವಾಗಿ ವಕ್ಫ್ ಬೋರ್ಡಿಗೆ ಮಾತ್ರ 60 ಲಕ್ಷ ರೂಪಾಯಿ ಬರುತ್ತಿತ್ತು 20 ಲಕ್ಷ ರೂಪಾಯಿಯನ್ನು ಅದರಲ್ಲಿ ಕಡಿಮೆ ಮಾಡಿ, ಬೇರೆ ಹೆಡ್‌ಗೆ ಕೊಡುವುದು ಸಮಂಜಸವಿಲ್ಲವೆಂದು ನಾನು ಹೇಳುತ್ತೇನೆ. ಈ ಬೋರ್ಡಿಗೆ ಜಾಸ್ತಿ ಗ್ರಾಂಟ್ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ:– ನಿಮ್ಮ ಅಭಿಪ್ರಾಯಕ್ಕೂ ನಮ್ಮ ಅಭಿಪ್ರಾಯಕ್ಕೂ ಯಾವುದೇ ವ್ಯತ್ಯಾಸವಿಲ್ಲ. ಆ ವಕ್ಫ್ ಸಂಸ್ಥೆಗಳಿಗೆ ಇನ್ನೂ ಹೆಚ್ಚು ಮೊತ್ತದ ಅನುದಾನವನ್ನು ಕೊಡಬೇಕೆಂದು ಖಂಡಿತವಾಗಿ ಉದ್ದೇಶಿಸಿದ್ದೇವೆ. ಇದರ ಬಗ್ಗೆ ನಾನು ಮುಖ್ಯಮಂತ್ರಿಯವರಿಗೆ ಪತ್ರ ಬರೆದು ತಿಳಿಸಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೆ, 15 ಅಂಶಗಳ ಕಾರ್ಯಕ್ರಮದ ಸಂಬಂಧದಲ್ಲಿ ಅಲ್ಪಸಂಖ್ಯಾತರನ್ನು ರಾಷ್ಟ್ರದ ಮುಖ್ಯವಾಹಿನಿಯ ಪ್ರವಾಹಕ್ಕೆ ತರಬೇಕೆಂದು ಉದ್ದೇಶಿಸಿ ಸರ್ಕಾರ ಪ್ರತಿ ವರ್ಷ ಸಹ ಕೊಡುವ ಹಣವನ್ನು ಕಡಿಮೆ ಮಾಡುತ್ತಿದೆ. ಈಗ ನಾವು ವಿಧಾನಸಭೆಯಲ್ಲಿ ಪ್ರಶ್ನೆ ಕೇಳತಕ್ಕಂಥ ಉದ್ದೇಶ ಖಚಿತವಾದ ಉತ್ತರವನ್ನು ಗಳಿಸುವುದಕ್ಕಾಗಿ. 'ನಾನು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ, ಅವರು ಹಣ ಕೊಡಬಹುದು, ಸಾಧ್ಯವಾದಷ್ಟು ಜಾಸ್ತಿ ಮಾಡುತ್ತೇವೆ' ಎನ್ನುವ ಮಾತು ಸರಿಯಾದ ಉತ್ತರ ಆಗುವುದಿಲ್ಲ. ತಮಗೆ ಗೊತ್ತಿರುವಂತೆ ರಾಜ್ಯದಲ್ಲಿ ಸಾವಿರಾರು ವಕ್ಫ್ ಇನ್ಸ್‌ಟಿಟ್ಯೂಷನ್ಸ್ ಇದೆ. ಅವುಗಳಿಗೆ ಕೊಡತಕ್ಕ 5–6 ಲಕ್ಷ ರೂಪಾಯಿಗಳು ಲೆಕ್ಕಕ್ಕೆ ಸಿಗುವುದಿಲ್ಲ. ಆದುದರಿಂದ, ಈ ವರ್ಷವಾದರೂ ವಿಶೇಷವಾಗಿ ಈ ಸಂಸ್ಥೆಗಳಿಗೆ 2 ಕೋಟಿ ರೂಪಾಯಿಗಳನ್ನಾದರೂ ಮುಡುಪಾಗಿಡಲು ಸಾಧ್ಯವೇ ?

ಶ್ರೀ ಎಸ್. ಎಂ. ಯಾಹ್ಯಾ:– 40 ಲಕ್ಷ ರೂಪಾಯಿಗಳನ್ನು renovation, repairs and others ಸ್ಕೀಮ್‌ಗೆ ಇಡಲಾಗಿದೆ. ಇನ್ನೊಂದು ಕರ್ನಾಟಕ ಸ್ಟೇಟ್ ವಕ್ಫ್ ಕೌನ್ಸಿಲ್ ಎಂದು, development of the wakf property ಇದಕ್ಕೆ 63 ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಅನಂತರ, ಕರ್ನಾಟಕ ಸ್ಟೇಟ್ ವಕ್ಫ್ ಫೌಂಡೇಷನ್ ಫಾರ್ ವುಮನ್ ಡೆವಲಪ್‌ಮೆಂಟ್ ಎಂದು ಇದಕ್ಕೆ 25 ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಇಷ್ಟಲ್ಲದೆ ಇನ್ನು ಹೆಚ್ಚಿನ ಹಣ ಕೊಡಬೇಕೆಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಹಾಗೂ ವಿತ್ತ ಮಂತ್ರಿಯವರನ್ನು ಕೇಳಿಕೊಂಡಿದ್ದೇವೆ. ಇದಕ್ಕೆ ಮೀಸಲಾಗಿಟ್ಟಿದ್ದ 42 ಲಕ್ಷ ರೂಪಾಯಿಗಳನ್ನು 60 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಖಂಡಿತವಾಗಿ ನನ್ನ ಲೆಕ್ಕದಲ್ಲಿ ಒಂದು ಕೋಟಿ ರೂಪಾಯಿ ಬಜೆಟ್‌ನಲ್ಲಿ ಹೆಚ್ಚಾಗುತ್ತದೆಂದು ಭಾವಿಸುತ್ತಾ ನಿಮ್ಮೆಲ್ಲರ ಸಹಕಾರ ಕೋರುತ್ತಾ ನಿಮಗೆ ಅಭಿನಂದಿಸಲಿಚ್ಚಿಸುತ್ತೇನೆ.

ಸಂಕೇನಹಳ್ಳಿ ಗ್ರಾಮಕ್ಕೆ ಪಶು ವೈದ್ಯ ಆಸ್ಪತ್ರೆ ಮಂಜೂರಾತಿ

102 (952) ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು):-